ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು ಚಂದ್ರಾ ಬಡಾವಣೆ ಉಪ-ವಿಭಾಗ, ಶಕ್ತಿಸೌಧ, 2ನೇ ಮಹಡಿ

4ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು- 560040.

---

ಸಂಖ್ಯೆ :- ವಾ-131/ವಾ.ಸ/ಸಭಾನಡವಳಿ/ /2020-21 ದಿನಾಂಕ : 06-02-2021

-: ಸಭೆಯ ನಡವಳಿಗಳು :-

ದಿನಾಂಕ. 06-02-2021 ಶನಿವಾರದಂದು ಬೆಳಿಗ್ಗೆ 11-00 ಘಂಟೆಗೆ ವಾರ್ಡ್ - 131, ನಾಯಂಡಹಳ್ಳಿ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

**********

ಶ್ರೀ ಪ್ರವೀಣ್‌ಲಿಂಗಯ್ಯ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್ - 131 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ದಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್- 19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂಥ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡೆಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

ಸಭೆಗೆ ಹಾಜರಿದ್ದವರು

| | |
|---|---|
| 1 | ಶ್ರೀ ಪ್ರವೀಣ್ ಲಿಂಗಯ್ಯ ಕಾರ್ಯಪಾಲಕ ಅಭಿಯಂತರರು<br>ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ -131 |
| 2 | ಶ್ರೀ ಯೋಗೇಶ್ .ಕೆ.ಪಿ ಸಹಾಯಕ ಅಭಿಯಂತರರು<br>ಕಾರ್ಯದರ್ಶಿ ಮತ್ತು ಸಂಚಾಲಕರು |
| 3 | ಶ್ರೀಮತಿ ದೀಪ .ಜೆ ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ |
| 4 | ಶ್ರೀಮತಿ ರೂಪ. ಬಿ ಸಹಾಯಕ ಅಭಿಯಂತರರು ಬೆಸ್ಕಾಂ |
| 5 | ಶ್ರೀ ಹೆಚ್.ಟಿ. ರಾಮಯ್ಯ ಹಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ ಅಭಿಷೇಕ್ ಕಿರಿಯ ಆರೋಗ್ಯ ಪರಿವೀಕ್ಷಕರು |
| 7 | ಶ್ರೀ ಧೀರ್ ಬಹದ್ದೂರ್ ದಮ್ಮಿ ಮಾರ್ಷಲ್ |
| 8 | ಡಾ|| ಶೋಭರಾಣಿ ವೈದ್ಯರು<br>ಪ್ರಾಥಮಿಕ ಆರೋಗ್ಯ ಕೇಂದ್ರ, ಪಂತರಪಾಳ್ಯ |
| 9 | ಶ್ರೀ ವೆಂಕಟೇಶ್ .ಎಂ ಕಂದಾಯ ಪರಿವೀಕ್ಷಕರು |
| 10 | ಶ್ರೀ ನವೀಣ್‌ಗೌಡ ಟ್ಯಾಕ್ಸ್ ಇನ್ಸ್‌ಪೆಕ್ಟರ್ |
| 11 | ಶ್ರೀ ವೆಂಕಟೇಶ್ ಸಾರ್ವಜನಿಕರು |
| 12 | ಘನತ್ಯಾಜ್ಯ ಗುತ್ತಿಗೆದಾರರು ಶ್ರೀ ಮುನ್ನಾ |

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ

ಮಾನ್ಯ ಸಭಾಧ್ಯಕ್ಷರಾದ ನೋಡೆಲ್ ಅಧಿಕಾರಿಯವರು ಕೋವಿಡ್- 19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ

- ವಾರ್ಡ್ ಸಂಖ್ಯೆ 131, ನಾಯಂಡಹಳ್ಳಿ ಕೋವಿಡ್- 19 ಸೋಂಕಿತರಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಎಷ್ಟು ಮಂದಿ ರೋಗಲಕ್ಷಣ ಹಾಗೂ ಲಕ್ಷಣರಹಿತ ಸೋಂಕಿತರಿಗೆ ಮತ್ತು ಅದರಲ್ಲಿ ಹೋಮ್ ಐಸೋಲೇಷನ್, ಹಾಸ್ಪಿಟಲ್ ಟ್ರೀಟ್‌ಮೆಂಟ್, ಡೆತ್‌ಕೇಸ್, ಡಿಸ್ಚಾರ್ಜ್ ಹಾಗೂ ಗುಣಮುಖರಾಗಿರುವವರು ಬಗೆಗಿನ ಎಲ್ಲಾ ಮಾಹಿತಿಗಳನ್ನು ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಪ್ರತಿ ಸಭೆಯಲ್ಲಿ ವರದಿ ಮಾಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಸಭೆಯಲ್ಲಿ ಕೋವಿಡ್- 19 ಸಾಂಕ್ರಮಿಕ ರೋಗವು ವಾರ್ಡಿನಲ್ಲಿ ಒಟ್ಟು 587 ಕೇಸ್‌ಗಳು ದಾಖಲಾಗಿದ್ದು, ಇದರಲ್ಲಿ ಇಲ್ಲಿಯವರೆಗೆ ಯಾವುದೇ ಸೋಂಕಿತರು ಇರುವುದಿಲ್ಲ 10 ಜನ ಮರಣ ಹೊಂದಿರುತ್ತಾರೆ ಹಾಗೂ 577 ಜನರು ಗುಣಮುಖರಾಗಿರುತ್ತಾರೆ.
- ವಾರ್ಡಿನಲ್ಲಿ ಪ್ರತಿದಿನ 120 ರಿಂದ 140 ಜನರಿಗೆ ಕೋವಿಡ್- 19 ಪರೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆಯೆಂದು ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು. ಮೊಬೈಲ್ ಟೆಸ್ಟಿಂಗ್ ಅವಶ್ಯವಿರುವ ಕಡೆ ಉಪಯೋಗಿಸಿಕೊಳ್ಳುವಂತೆ ಸೂಚಿಸಿದರು.
- ಕಂದಾಯ ಪರಿವೀಕ್ಷಕರು ಮಾತನಾಡುತ್ತಾ, ಕಾಂಟಾಕ್ಟ್ ಟ್ರೇಸಿಂಗ್ ಮಾಡುತ್ತಿರುವ ಮಹಿಳಾ ಕೋವಿಡ್ ವರ್ಕರ್ಸ್‌ಗಳಿಗೆ ವಾಹನ ಸೌಲಭ್ಯ ಮಾಡಿಕೊಡಬೇಕಾಗಿ ಕಂದಾಯ ಪರಿವೀಕ್ಷಕರು ವಾರ್ಡ್ – 131 ರವರು ಸಭೆಯಲ್ಲಿ ಕೋರಿದರು.
- ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ಮುಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ಆರೋಗ್ಯ ಸಮಿತಿ ಸದಸ್ಯರನ್ನು ಹಾಜರುಪಡಿಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಹಾಗೂ ಇನ್ನಿತರೆ ವಿಷಯಗಳ ಬಗ್ಗೆ ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕುಂದುಕೊರತೆಗಳನ್ನು ಚರ್ಚಿಸುವಂತೆ ಸಭೆಯಲ್ಲಿ ಸೂಚಿಸಿದರು.
- ಸಭೆಯಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೇಬಿಸ್ ಔಷಧಿಯ ಸಂಗ್ರಹಣೆಯು ಇಲ್ಲವೆಂದು ಸಭೆಗೆ ಸೂಚಿಸಿದರು.

2) ಅಭಿಯಂತರರ ವಿಭಾಗದ ಬಗ್ಗೆ

ಮಾನ್ಯ ಸಭಾಧ್ಯಕ್ಷರಾದ ನೋಡೆಲ್ ಅಧಿಕಾರಿಯವರು ವಾರ್ಡ್ – 131 ಅಭಿಯಂತರ ವಿಭಾಗದ ಬಗ್ಗೆ ಮಾತನಾಡುತ್ತಾ ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ರಸ್ತೆಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ಸಹಾಯ 2.0 ಅಪ್ಲಿಕೇಷನ್‌ನಲ್ಲಿ ದಾಖಲಾಗುತ್ತಿರುವ ದೂರುಗಳಿಗೆ ಶೀಘ್ರವಾಗಿ ಸೂಕ್ತ ಕ್ರಮವಹಿಸಬೇಕಾಗಿ ತಿಳಿಸಿದರು.
- ಮರದಲ್ಲಿ ಓಎಫ್‌ಸಿ ಕೇಬಲ್‌ಗಳು ಹಾದುಹೋಗಿರುವ ದೂರು ಸಹಾಯಕ 2.0 ದಾಖಲಾಗಿದ್ದು, ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ನಂತರ ಮುಖ್ಯ ಅಭಿಯಂತರರು ಓಎಫ್‌ಸಿ ಸೆಲ್ ರವರಿಗೆ ಮೊಬೈಲ್ ಮೂಲಕ ಸಂಪರ್ಕಿಸಿ ಸಮಸ್ಯೆಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ವಿಚಾರಿಸಿದರು.
- ಸಹಾಯಕ ಅಭಿಯಂತರರು ಮಾತನಾಡುತ್ತಾ, ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಕಂಡುಬಂದಿರುವಂತಹ ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, ಇತ್ತೀಚೆಗೆ ಕಂಡುಬಂದಂತಹ ಗುಂಡಿಗಳು ಮಾತ್ರ ಬಾಕಿಯಿರುತ್ತದೆ ಈಗ ಮಳೆಗಾಲವಾದ್ದರಿಂದ ಕಾಮಗಾರಿಯನ್ನು ನಿಲ್ಲಿಸಲಾಗಿದ್ದು, ನಂತರದಲ್ಲಿ ಉಳಿದ ಬಾಕಿ ಗುಂಡಿಗಳನ್ನು ಮುಚ್ಚಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ongoing works ಗಳ ಬಗ್ಗೆ ವಿವರಣೆ ನೀಡಿ ಸದರಿ ಕಾಮಗಾರಿಗಳು ನಿರ್ದಿಷ್ಟ ಅವಧಿಯಲ್ಲಿ ಮುಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಹಾಗೂ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
- ವಾರ್ಡಿನ ವ್ಯಾಪ್ತಿಯಲ್ಲಿರುವ ಶೆಡ್‌ಗಳನ್ನು ಹಾಗೂ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಪೂರ್ಣವಾಗಿ ನಿಷೇಧಿಸುವ ಸಲುವಾಗಿ ಮಾಲಿನ್ಯ ನಿಯಂತ್ರಣಾ ಕಛೇರಿಗೆ ಪತ್ರಬರೆಯಲು ಸಭೆಯಲ್ಲಿ ಸೂಚಿಸಿದರು.

3) ವಿದ್ಯುತ್ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿ ವಿದ್ಯುತ್ ಸಂಪರ್ಕ ಕಡಿಗಗೊಳಿಸುತ್ತಿರುವ ಬಗ್ಗೆ ಸಾರ್ವಜನಿಕರು ಅಕ್ಷೇಪಣೆ ವ್ಯಕ್ತ ಪಡಿಸಿರುವುದನ್ನು ಗಮನಕ್ಕೆ ತರಲಾಗಿದೆ. ಇತ್ತೀಚಿಗೆ ಅಂಡರ್ ಯುಜಿ ಕೇಬಲ್ ಹಾಕುತ್ತಿದ್ದು, ರಸ್ತೆಯಲ್ಲಿ ಆಗೆದ ಪಿಟ್‌ಗಳನ್ನು ಸಾರ್ವಜನಿಕ ಸಂಚಾರಕ್ಕೆ ಸುಗಮ ಗೊಳಿಸಲು ರೆಸ್ಟೋರೇಷನ್ ಮಾಡಲು ಮಾಡುವಂತೆ ತಿಳಿಸಲಾಯಿತು ಹಾಗೂ ಮರಗಳ ರೆಂಬೆಗಳನ್ನು ಕತ್ತರಿಸಿರುವುದು ಸರಿಯಷ್ಟೇ, ತೆರವುಗೊಳಿಸುವ ಕಾರ್ಯವನ್ನು ಆಗಿಂದಾಗ್ಗೆ ರಸ್ತೆಯಲ್ಲಿ ಬಿದ್ದಿರುವ ರೆಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು.

4) ತೋಟಗಾರಿಕೆ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿನ ಉದ್ಯಾನವನಗಳ ಪಟ್ಟಿ ಮತ್ತು ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಬಗೆಗಿನ ಮಾಹಿತಿಗಳನ್ನು ಸಭೆಗೆ ವರದಿ ಮಾಡಲು ತಿಳಿಸಿದರು.

5) ಅರಣ್ಯ ವಿಭಾಗದ ಬಗ್ಗೆ:-

- ವಾರ್ಡ್‌ನಲ್ಲಿ ಮಳೆಯಿಂದಾಗಿ ಬಿದ್ದಿರುವ ಮರಗಳನ್ನು ಕತ್ತರಿಸಿ ತೆರವುಗೊಳಿಸದೇ ಹಾಗೇ ಬಿಟ್ಟಿರುತ್ತಾರೆ ಇದರಿಂದಾಗಿ ಸಾರ್ವಜನಿಕರು ದೂರು ನೀಡಿರುತ್ತಾರೆ. ಆದ್ದರಿಂದ ರೆಂಬೆಗಳನ್ನು ಕತ್ತರಿಸಿ ಅವುಗಳನ್ನು ಅರಣ್ಯ ವಿಭಾಗದವರೇ ತೆರವುಗೊಳಿಸಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು.

6) ಘನತ್ಯಾಜ್ಯ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿನ ಘನತ್ಯಾಜ್ಯಗಳನ್ನು ಸಂಗ್ರಹಿಸುವ ಬಗ್ಗೆ ಯಾವುದೇ ದೂರುಗಳು ಬಾರದಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮವಹಿಸಬೇಕಾಗಿ ತಿಳಿಸಿದರು.
- ಪೌರಕಾರ್ಮಿಕರಿಗೆ ಮತ್ತು ಆಟೋಚಾಲಕರಿಗೆ ವಾರ್ಡ್‌ನ ಪ್ರತಿ ರಸ್ತೆಗಳಲ್ಲಿ ಹಸಿ ಮತ್ತು ಒಣ ಘನತ್ಯಾಜ್ಯಗಳನ್ನು ಸರಿಯಾಗಿ ಸಂಗ್ರಹಣೆ ಮಾಡಲು ತಿಳಿಸಿದರು.
- ಒಣತ್ಯಾಜ್ಯ ಸಂಗ್ರಹಣೆ ಹಾಗೂ ಬ್ಲಾಕ್ ಸ್ಪಾಟ್‌ಗಳಲ್ಲಿ ಇರುವ ತ್ಯಾಜ್ಯಗಳನ್ನು ಸಂಗ್ರಹಣೆ ಮಾಡಲು ಸೂಚಿಸಿದರು ಹಾಗೂ 7-00 ಘಂಟೆಯ ಬದಲಾಗಿ 8-00 ಘಂಟೆಗೆ ಹಾಜರಿರಲು ಸೂಚಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಂಗಡಿ, ಹೋಟೆಲ್ ಹಾಗೂ ಫ್ಯಾಕ್ಟರಿಗಳಿಗೆ ವಾಣಿಜ್ಯ ಪರವಾನಗಿ ನೀಡಿರುವ ಬಗ್ಗೆ ಮಾಹಿತಿಗಳನ್ನು ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ನಾಯಂಡಹಳ್ಳಿ ವಾರ್ಡಿನಲ್ಲಿ ಒಣತ್ಯಾಜ್ಯ ಸಂಗ್ರಹಣಾ ಕೇಂದ್ರ ಘಟಕವನ್ನು ನಿರ್ಮಾಣ ಮಾಡಲು ಅಧ್ಯಕ್ಷರು ಸಭೆಯಲ್ಲಿ ಸೂಚಿದರು.
- ನಾಯಂಡಹಳ್ಳಿ ವಾರ್ಡಿನಲ್ಲಿ ಘನತ್ಯಾಜ್ಯ ಗುತ್ತಿಗೆದಾರರಾದ ಶ್ರೀ ಮುನ್ನಾ ರವರು ದಿನನಿತ್ಯದ ಮನೆಮನೆ ಕಸವನ್ನು ಪಡೆಯಲು ಪ್ರಸ್ತುತ 16 ಆಟೋ ಟಿಪ್ಪರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ 06 ಆಟೋಗಳನ್ನು ಹೆಚ್ಚುವರಿಯಾಗಿ ನೀಡಬೇಕೆಂದು ನೋಡೆಲ್ ಅಧಿಕಾರಿಯವರನ್ನು ಗುತ್ತಿಗೆದಾರರು ಸಭೆಯಲ್ಲಿ ಕೋರಿದರು.
- ನಾಯಂಡಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಈ ಹಿಂದೆ 03 ಕಾಂಪ್ಯಾಕ್ಟರ್‌ಗಳನ್ನು ನೀಡಲಾಗಿತ್ತು ಪ್ರಸ್ತುತ ಒಂದು ಕಾಂಪ್ಯಾಕ್ಟರ್‌ಗಳನ್ನು ಕಡಿತ ಮಾಡಿ 02 ಕಾಂಪ್ಯಾಕ್ಟರ್‌ಗಳ ಬಳಕೆಗೆ ಅವಕಾಶ ನೀಡಲಾಗಿದೆ ಆದರೆ ನಾಯಂಡಹಳ್ಳಿ ವಾರ್ಡ್ ವ್ಯಾಪ್ತಿಯು ವಿಸ್ತಾರವಾಗಿದ್ದು, ಇದರಲ್ಲಿ ಸುಮಾರು ಎಂಟು ಜಾಗಗಳನ್ನು ಬ್ಲಾಕ್‌ಸ್ಪಾಟ್‌ಗಳೆಂದು ಗುರುತಿಸಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಹಾಗೂ ಬ್ಲಾಕ್‌ಸ್ಪಾಟ್‌ಗಳಲ್ಲಿ ಕಸವನ್ನು ತೆಗೆಯಲು ಕಟಾವು ಮಾಡಲಾಗಿದ್ದ ಕಾಂಪ್ಯಾಕ್ಟರ್‌ನ್ನು ಮತ್ತೆ ಒದಗಿಸಲು ಸಭೆಯಲ್ಲಿ ಗುತ್ತಿಗೆದಾರರು ಕೋರಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಹಸಿ ಮತ್ತು ಒಣತ್ಯಾಜ್ಯ ಸಂಗ್ರಹಣಾ ಘಟಕವನ್ನು ಸ್ಥಾಪಿಸುವುದು ಅವಶ್ಯವಿರುತ್ತದೆ. ಆದುದರಿಂದ ಸದರಿ ಘಟಕ ಸ್ಥಾಪನೆಗೆ ಶೀಘ್ರವೇ ಸೂಕ್ತ ಸ್ಥಳವನ್ನು ಗುರುತುಪಡಿಸಲು ಸಭೆಯಲ್ಲಿ ಗುತ್ತಿಗೆದಾರರು ಕೋರಿದರು.
- ವಾರ್ಡ್ ವ್ಯಾಪ್ತಿಯಲ್ಲಿ ವಿವಿಧ ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ದಂಡ ಹಾಕಿ ದಂಡದ ಮೊತ್ತವನ್ನು ವಾರ್ಡಿನ ಮಾರ್ಷಲ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ ಮಾಸ್ಕ್ ಧರಿಸದ 129 ಸಾರ್ವಜನಿಕರಿಗೆ ತಲಾ ರೂ. 250/- ರಂತೆ ವಸೂಲಿ ಮಾಡಿರುತ್ತಾರೆ. ಸಾರ್ವಜನಿಕ ಅಸಂಬದ್ಧ ಕಾರ್ಯನಿರ್ವಹಣೆಗೆ 3 ಕೇಸ್‌ಗಳಲ್ಲಿ ತಲಾ ರೂ. 300/- ರಂತೆ ಹಾಗೂ ಘನತ್ಯಾಜ್ಯ ನಿರ್ವಹಣಾ ವಿಷಯದಲ್ಲಿ ತಲಾ 03 ಕೇಸ್‌ಗಳಿಗೆ ರೂ. 300/- ರಂತೆ ಒಟ್ಟು ಜನವರಿ – 2021 ರ ಮಾಹೆಯಲ್ಲಿ ರೂ. 34,250/- ಗಳನ್ನು ವಸೂಲು ಮಾಡಲಾಗಿದೆಯೆಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಹಸಿ ಮತ್ತು ಒಣ ತ್ಯಾಜ್ಯ ಸಂಗ್ರಹಣೆಯು 4.5 ಟನ್ ರಿಂದ 5.5 ಟನ್‌ವರೆಗೆ ಶೇಖರಣೆಯಾಗುತ್ತಿದೆಯೆಂದು ಸಂಬಂಧಪಟ್ಟ ಅಧಿಕಾರಿಯವರು ಸಭೆಗೆ ತಿಳಿಸಿದರು.

ವಾರ್ಡಿನಲ್ಲಿರುವಂತಹ ಎಲ್ಲಾ ಅಂಗನವಾಡಿ

- ಸಭೆಯಲ್ಲಿ ಅಂಗನವಾಡಿ ಶಿಕ್ಷಕಿಯರು ಭಾಗವಹಿಸಿ ವಾರ್ಡಿನಲ್ಲಿರುವಂತಹ ಎಲ್ಲಾ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸೂಚನೆ ಬಂದಿರುವುದರಿಂದ ಸ್ಯಾನಿಟೈಸರ್ ಮಾಡಿಸಲು ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಲು ಕೋರಿದರು.

7) ಬಿಡಬ್ಲ್ಯೂಎಸಎಸ್‌ಬಿ ವಿಭಾಗದ ಬಗ್ಗೆ:-

- ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಹೇಳುತ್ತಾ, ಮ್ಯಾನ್‌ಹೋಲ್ ಪಕ್ಕದಲ್ಲಿ ರಸ್ತೆಯನ್ನು ಅಗೆದು ಅದನ್ನು ಸರಿಪಡಿಸದೇ ಹಾಗೇ ಬಿಟ್ಟಿರುತ್ತಾರೆ ಅದನ್ನು ಅತೀ ಶೀಘ್ರವಾಗಿ ಸರಿಪಡಿಸಿ ವರದಿ ಮಾಡಲು ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಿಳಿಸಿದರು.
- ಮ್ಯಾನ್‌ಹೋಲ್‌ಗಳಿಂದ ತೆಗೆದ ಸಿಲ್ಟ್‌ಗಳನ್ನು ರಸ್ತೆ ಬದಿಯಲ್ಲಿ ಹಾಕಿ ಅದನ್ನು ಮೂರು ವಾರವಾದರೂ ತೆರವುಗೊಳಿಸದೇ ಬಿಟ್ಟಿರುತ್ತೀರಿ ಅವುಗಳನ್ನು ತಾವೇ ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಿಳಿಸಿದರು.
- ರಸ್ತೆ ಬದಿಯಲ್ಲಿ ಹಾಕಿರುವ ಮ್ಯಾನ್‌ಹೋಲ್‌ಗಳಿಂದ ತೆಗೆದ ಸಿಲ್ಟ್‌ಗಳನ್ನು ತೆರವುಗೊಳಿಸಲು ಮತ್ತು ವಾರ್ಡ್‌ನ ಕೆಲವು ರಸ್ತೆಗಳಲ್ಲಿನ ಮ್ಯಾನ್‌ಹೋಲ್‌ಗಳ ಪಕ್ಕದಲ್ಲಿನ ರಸ್ತೆಯ ಭಾಗವು ಕುಸಿಯುತ್ತಿರುತ್ತದೆ ಅಂತಹ ಮ್ಯಾನ್‌ಹೋಲ್‌ಗಳನ್ನು ಗುರುತಿಸಿ ಅವುಗಳನ್ನು ಶೀಘ್ರವಾಗಿ ದುರಸ್ಥಿಗೊಳಿಸಲು ತಿಳಿಸಿ ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ತಿಳುವಳಿಕೆ ಪತ್ರ ನೀಡುವಂತೆ ವಾರ್ಡ್‌ನ ಸಹಾಯಕ ಅಭಿಯಂತರರಿಗೆ ತಿಳಿಸಿದರು.

8) ಬೆಸ್ಕಾಂ ವಿಭಾಗದ ಬಗ್ಗೆ:-

- ಬೆಸ್ಕಾಂ ವತಿಯಿಂದ ಮರಗಳ ಭಾಗಗಳನ್ನು ಕತ್ತರಿಸಿ ರಸ್ತೆ ಬದಿಯಲ್ಲಿ ಹಾಗೇ ಬಿಟ್ಟಿರುತ್ತಾರೆ. ಅವುಗಳನ್ನು ಶೀಘ್ರವಾಗಿ ತೆರವುಗೊಳಿಸಿ ವರದಿ ಮಾಡುವಂತೆ ತಿಳಿಸಿದರು.
  ವಾರ್ಡಿನ ವ್ಯಾಪ್ತಿಯಲ್ಲಿನ ಬಿದಿ ದೀಪಗಳ ಸಮರ್ಪಕ ನಿರ್ವಹಣೆ ಕುರಿತಾಗಿ ಗುತ್ತಿಗೆದಾರರಿಗೆ ಮೊಬೈಲ್ ಕರೆ ಮೂಲಕ ತಿಳಿಸಲಾಯಿತು ಹಾಗೂ ಮುಂದಿನ ಸಭೆಗೆ ಖುದ್ದು ಹಾಜರಾಗಲು ಸೂಚಿಸಲಾಯಿತು.

9) ಪೊಲೀಸ್ ವಿಭಾಗದ ಬಗ್ಗೆ:-

- ನಾಯಂಡಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿನ ಪಂತರಪಾಳ್ಯ ಮತ್ತು ನಾಯಂಡಹಳ್ಳಿ ವ್ಯಾಪ್ತಿಯಲ್ಲಿ ಗಾಂಜಾ ಸೇವಿಸುವ ವ್ಯಸನಿಗಳು ಕಂಡುಬರುತ್ತಿದ್ದು, ಪೊಲೀಸ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ, ಸಭೆಯಲ್ಲಿದ್ದ ಅಧಿಕಾರಿಗಳ ಗಮನಕ್ಕೆ ತರಲಾಯಿತು.
- ಬಿಬಿಎಂಪಿ ಮಾರ್ಷಲ್‌ಗಳೊಂದಿಗೆ ಕೂಡಿ ಮಾಸ್ಕ್ ಧರಿಸದೇ ರಸ್ತೆಯಲ್ಲಿ ಸಂಚರಿಸುವವರಿಗೆ ಸರ್ಕಾರದ ನಿರ್ದೇಶನದಂತೆ ದಂಡ ವಿಧಿಸಿ ಮಾಸ್ಕ್ ಧರಿಸಿಕೊಂಡು ಸಂಚರಿಸುವಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಬಗ್ಗೆ ಸೂಕ್ತ ಕ್ರಮ ವಹಿಸಬೇಕಾಗಿ ತಿಳಿಸಿದರು.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸರಿಪಡಿಸುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಾರ್ಡ್ ಕಮಿಟಿ ವಾರ್ಡ್ – 131 ವಾಟ್ಸ್‌ಅಪ್ ಗ್ರೂಪ್ ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ 131 ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 131

ಅಧ್ಯಕ್ಷರು,
ಹಾಗೂ ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣೆ
ವಾರ್ಡ್ ಸಂಖ್ಯೆ 131, ನಾಯಂಡಹಳ್ಳಿ

ಪ್ರತಿಯನ್ನು:-

1) ಮಾನ್ಯ ಮಾನ್ಯ ವಲಯ ವಿಶೇಷ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4) ವೃತ್ತ ಆರಕ್ಷಕ ನಿರೀಕ್ಷಕರು (ಕಾನೂನು ಮತ್ತು ಸುವ್ಯವಸ್ಥೆ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5) ವೃತ್ತ ಆರಕ್ಷಕ ನಿರೀಕ್ಷಕರು (ಸಂಚಾರಿ ವಿಭಾಗ) ಪೊಲೀಸ್ ಇಲಾಖೆ, ವಿಜಯನಗರ / ಚಂದ್ರಾಲೇಔಟ್ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೆಸ್ಕಾಂ, ಕಾಮಾಕ್ಷಿಪಾಳ್ಯ / ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ವಿಜಯನಗರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಕೋಶ ಗೋವಿಂದರಾಜನಗರ ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬೀದಿ ದೀಪ ನಿರ್ವಹಣೆ (ಬಿಬಿಎಂಪಿ ವಿದ್ಯುತ್) ವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
10) ಸಹಾಯಕ ಕಂದಾಯ ಅಧಿಕಾರಿಗಳು (ಚಂದ್ರಾಬಡಾವಣೆ) ಉಪವಿಭಾಗ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
11) ಅಧೀಕ್ಷಕರು ತೋಟಗಾರಿಕೆ ಇಲಾಖೆ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
12) ಆರೋಗ್ಯ ವೈಧ್ಯಾಧಿಕಾರಿಗಳು (ಗೋವಿಂದರಾಜನಗರ) ವಿಭಾಗರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
13) ವಲಯ ಅರಣ್ಯಾಧಿಕಾರಿ (ಪಶ್ಚಿಮ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
14) ಕಿರಿಯ / ಹಿರಿಯ ಆರೋಗ್ಯ ಪರಿವೀಕ್ಷಕರು ಸದಸ್ಯರುಗಳ ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕೆ
15) ವಾರ್ಡ್ ಪ್ರದೇಶಗಳ ಸ್ಥಳೀಯ ನಾಗರೀಕ ಕಲ್ಯಾಣ ಸಂಘಗಳು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.